ದಿ: 07.01.2026 ರಂದು ಸಾಕ್ಷಿಯನ್ನು ಪುನ:ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಕೆ.ಆರ್.ಎ. ವಕೀಲರಿಂದ.

13. ನಿ.ಡಿ.12 ರಂತೆ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂರ್ವಕ್ಕೆ ಯಳಚಳ್ಳಿ ಮುಖ್ಯ ರಸ್ತೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ನಿ.ಡಿ.12 ದಾಖಲೆಯು ನನ್ನ ತಂದೆ ಮತ್ತು ರಾಮಸ್ವಾಮಿರವರು ರಾಜಿ ಮಾಡಿಕೊಂಡ ದಾವೆಯಲ್ಲಿ ದಾಖಲಿಸಿದ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿ.ಡಿ.12 ರಲ್ಲಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯು ಯಳಚಳ್ಳಿ ಮುಖ್ಯ ರಸ್ತೆಯ ನಂತರ ಪ್ರಾರಂಭವಾಗುತ್ತದೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪಕ್ಷಗಾರರ ಹೇಳಿಕೆ ಮೇರೆಗೆ ಆ ರೀತಿ ತಯಾರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿ.ಡಿ.12 ರಲ್ಲಿ ನನ್ನ ತಂದೆಯ ಸಹಿ ಇರುತ್ತದೆ ಎಂದರೆ ಸರಿ. ನೀವು ನಿಮ್ಮ ಈ ಹಿಂದಿನ ಪಾಟೀ ಸವಾಲಿನಲ್ಲಿ ನಿ.ಡಿ.12 ದಾಖಲೆಯು ಸುಳ್ಳಿನಿಂದ ಕೂಡಿದೆ ಎಂದು ಸಾಕ್ಷ್ಯ ನುಡಿದಿದ್ದು ಮತ್ತು ಸದರಿ ದಾಖಲೆಯ ಕುರಿತು ಯಾವುದಾದರು ಮೇಲ್ಮನವಿ ಸಲ್ಲಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ವಾದಿಯ ಅಣ್ಣ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದು ಕಾಣಿಸಿರುತ್ತೀರಾ ಎಂದರೆ ಸರಿ.

14. ವಾದಿಯ ಅಣ್ಣನ ಹೆಸರು ಲಕ್ಷ್ಮಿ ನಾರಾಯಣ. ವಾದಿಯ ಅಣ್ಣ ಪೂರ್ವ ಪಶ್ಚಿಮ ಸುಮಾರು 30 ಅಥವಾ 31 ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ. ಆ ರೀತಿ ವಾದಿಯ ಅಣ್ಣ ಪೂರ್ವ ಪಶ್ಚಿಮ ಸುಮಾರು 30 ಅಥವಾ 31 ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ ಎನ್ನುವ ಕುರಿತು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಆ ರೀತಿ ನೀವು ವಾದಿಯ ಅಣ್ಣ ಪೂರ್ವ ಪಶ್ಚಿಮ ಸುಮಾರು 30 ಅಥವಾ 31 ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ ಎಂದು ಯಾವ ಆಧಾರದ ಮೇರೆಗೆ ನುಡಿಯುತ್ತಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ರಾಜಿ ಆಧಾರದ ಮೇರೆಗೆ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

15. ನಿಪಿ.3 ದಾಖಲೆಯು ಸದರಿ ವಾದಿ ಮತ್ತು ವಾದಿಯ ಅಣ್ಣ ಮಾಡಿಕೊಂಡಿದ್ದಾರೆ ಎಂದು ಹೇಳುವ ರಾಜಿ ಎಂದರೆ ಸರಿ. ನಿ.ಪಿ.3 ರಲ್ಲಿ ವಾದಿ ಅಣ್ಣನಿಗೆ ಇಂತಿಷ್ಟೆ ವಿಸ್ತೀರ್ಣದ ಆಸ್ತಿಯನ್ನು ನೀಡಲಾಗಿರುತ್ತದೆ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ. ನಿ.ಡಿ.1 ರಲ್ಲಿರುವ ಬಿಳಿ ಬಣ್ಣದ ಮನೆ ವಾದಿಯ ಅಣ್ಣ ಲಕ್ಷ್ಮಿ ನಾರಾಯಣರವರ ಮನೆ ಎಂದರೆ ಸರಿ. ನಿ.ಡಿ.1 ರಲ್ಲಿ ಲಕ್ಷ್ಮಿ ನಾರಾಯಣರವರು ತಮ್ಮ ಮನೆಯ ಮುಂಭಾಗ 15 ಅಡಿ ವಿಸ್ತೀರ್ಣದ ಜಾಗವನ್ನು ಖಾಲಿ ಬಿಟ್ಟು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಖಾಲಿ ಜಾಗ ಸರ್ಕಾರಿ ಜಾಗ ಎಂದು ನುಡಿಯುತ್ತಾರೆ. ಆ ರೀತಿ ಲಕ್ಷ್ಮಿ ನಾರಾಯಣರವರ ಮನೆಯ ಮುಂಭಾಗ ಇರುವ ಖಾಲಿ ಜಾಗ ಸರ್ಕಾರಿ ಜಾಗ ಎನ್ನುವ ಕುರಿತು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಸದರಿ ಲಕ್ಷ್ಮಿ ನಾರಾಯಣರವರು ಖಾಲಿ ಜಾಗ ಮತ್ತು ಮನೆ ಸೇರಿ ಒಟ್ಟು ಪೂರ್ವ ಪಶ್ಚಿಮ 60 ಅಡಿ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲಕ್ಷ್ಮಿ ನಾರಾಯಣರವರು ತಮ್ಮ ಮನೆಯ ಹಿಂಭಾಗದಲ್ಲಿ ಉಳಿಸಿಕೊಂಡಿರುವ 15 ಅಡಿ ವಿಸ್ತೀರ್ಣದ ಜಾಗದಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲಕ್ಷ್ಮಿ ನಾರಾಯಣರವರ ಮನೆಯ ಪಶ್ಚಿಮ ದಿಕ್ಕಿನ ಹಿಂಭಾಗದಲ್ಲಿರುವ ವಾದಿಯ ಸ್ವಾಧೀನದಲ್ಲಿರುವ 15 ಅಡಿ ವಿಸ್ತೀರ್ಣದ ಜಾಗ ಹೊರತುಪಡಿಸಿ ಆನಂತರದ ಉಳಿದ ಜಾಗ ೧ನೇ ವಾದಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾದಿ ಸ್ವಾಧೀನದಲ್ಲಿರುವ 15 ಅಡಿ ವಿಸ್ತೀರ್ಣದ ನಂತರ ಜಾಗವು ಖಾನೇಷುಮಾರಿ ಸಂಖ್ಯೆ 1 ಆಸ್ತಿಗೆ

ಸಂಬಂಧಿಸಿದ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಿಸಿದ ಜಾಗವನ್ನು ಅವರ ಅಣ್ಣ ಸ್ವಾಧೀನಪಡಿಸಿಕೊಂಡಿದ್ದು ಮತ್ತು ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಸಲುವಾಗಿ ವಾದಿಯು ತನ್ನ ಅಣ್ಣನ ವಿರುದ್ದ ದಾವೆಯನ್ನು ದಾಖಲಿಸದೆ ಪ್ರತಿವಾದಿಗಳ ವಿರುದ್ದ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ೧ನೇ ಪ್ರತಿವಾದಿಯ ನಡುವೆ ಅನೇಕ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಇರುವುದರಿಂದ ಪ್ರತಿವಾದಿಗಳ ವಿರುದ್ದ ದ್ವೇಷ ಸಾಧಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಒಂದು ನೊಂದಾಯಿತ ಕ್ರಯ ಪತ್ರದಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೆ ಮಾಲೀಕ ಮತ್ತು ಹಕ್ಕುದಾರನಾಗಿರುತ್ತಾನೆ ಎಂದರೆ ಸರಿ. ವಾದಿಯ ತಂದೆ ಚಿನ್ನಪ್ಪಯ್ಯ ರವರು ಪ್ರತಿವಾದಿ ತಂದೆಯಾದ ನಂಜಪ್ಪರವರ ಕಡೆಯಿಂದ ಪೂರ್ವ ಪಶ್ಚಿಮ 75 ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ವಿಸ್ತೀರ್ಣದ ಜಾಗವನ್ನು ನೊಂದಾಯಿತ ಕ್ರಯ ಪತ್ರದಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಎಲ್ಲಾ ವಿಚಾರಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಥವಾ ಅವರ ವಾರಸುದಾರರು ವಾದಿಯ ಸ್ವಾಧೀನತೆಗೆ ಯಾವತ್ತು ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.